**Crl Mis** 03/2015

**RW**-2

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 23.02.2024 ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದಃಶ್ರೀ RSM ರವರಿಂದ**

ಅರ್ಜಿದಾರರು ಎದುರುದಾರರ ಮೇಲೆ ಜೀವನಾಂಶಕ್ಕಾಗಿ ಈ ಪ್ರಕರಣವನ್ನು ದಾಖಲಿಸಿರುತ್ತಾರೆ. ನನಗೆ ಚಂದ್ರಮ್ಮ ರವರ ಪರಿಚಯವಿಲ್ಲ. ನಾನು ಮತ್ತು ಎದುರುದಾರರು ಬೇರೆ ಬೇರೆ ಸೆಕ್ಷನ್‌ಗಳಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಎದುರುದಾರರಿಗೆ 3 ಜನ ಗಂಡು ಮಕ್ಕಳಿರುತ್ತಾರೆ ಅವರುಗಳ ಹೆಸರು ಮಂಜುನಾಥ್, ನಂದಕುಮಾರ್ ಮತ್ತು ಪ್ರಕಾಶ್. 3 ಜನ ಮಕ್ಕಳೂ ಸಹ ಯಾವುದೇ ಕೆಲಸವನ್ನು ಮಾಡುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಎದುರುದಾರರ ಮನೆಗೆ ನಾನು ಹಬ್ಬಗಳಿಗೆ ಹೋಗಿರುತ್ತೇನೆ. ಅವು ಯಾವ ಹಬ್ಬಗಳು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಮನೆ ದೇವರ ಹಬ್ಬ ಎಂದು ನುಡಿಯುತ್ತಾರೆ. ಎದುರುದಾರರು ರಜಾ ದಿನಗಳಲ್ಲಿ ತಮ್ಮ ಸ್ವಂತ ಊರಾದ ಹೊನ್ನೂರಿಗೆ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಎದುರುದಾರರು ಮೂಲತಃ ಹೊನ್ನೂರಿನವರೆ. ಪ್ರತೀ ರಜೆದಿನಗಳಲ್ಲಿ ಎದುರುದಾರರು ಹೊನ್ನೂರಿಗೆ ಬರುತ್ತಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಎದುರುದಾರರು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಎಂದೂ ಸಹ ಎದುರುದಾರರು ಅರ್ಜಿದಾರರು ಹೇಳಿದ ಹಾಗೆ ನಡೆದುಕೊಂಡಿರುವುದಿಲ್ಲ ಎಂಬ ಕಾರಣದಿಂದ ನಾನುನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೀಗೆ ಬರೆಯಿಸಿರುತ್ತೇನೆ.

ಅರ್ಜಿದಾರರು ಅಕ್ರಮವಾಗಿ ಜೀವನಾಂಶ ಪಡೆಯುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರ ಕೋರಿಕೆಯಂತೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಬೆರಳಚ್ಚು ಮಾಡಿಸಿರುವ ಪ್ರಮಾಣ ಪತ್ರಕ್ಕೆ ನಾನು ಕೇವಲ ಸಹಿಯನ್ನು ಮಾಡಿರುವುದನ್ನು ಹೊರತು ಪಡಿಸಿದರೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಸಹದ್ಯೋಗಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

23.02.2024.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.